ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,
ಕುಂದಾಪುರ

ಸಿ.ಸಿ. ನಂಬ್ರ:2287/2017

CW-1

ದಿನಾಂಕ: 19-09-2022

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಅನಂತ ಕಾಮತ್ |
| ತಂದೆಯ ಹೆಸರು | : | ಶ್ರೀನಿವಾಸ ಕಾಮತ್ |
| ವಯಸ್ಸು | : | 67 ವರ್ಷ |
| ಉದ್ಯೋಗ | : | ಸಣ್ಣ ಕೈಗಾರಿಕೆ |
| ವಾಸ ಸ್ಥಳ | : | ಬೀಜಾಡಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಪಿರ್ಯಾದುದಾರ ಪರ ವಕೀಲರಾದ ಶ್ರೀ ಎನ್ ಎಸ್ ಆರ್ ಬಿ ರವರಿಂದ:**

ಈ ಪಿರ್ಯಾದನ್ನು ನಾನು 13 ಜನವರ ವಿರುದ್ದ ದಾಖಲಿಸಿರುತ್ತೇನೆ. ಆರೋಪಿತರ ಪರಿಚಯವಿರುತ್ತದೆ. ನಾನು ಬೀಜಾಡಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನಮಗೆ ಬೀಜಾಡಿ ಗ್ರಾಮದಲ್ಲಿ ಸರ್ವೆ ನಂಬ್ರ 199/2ಎ ರಲ್ಲಿ 53 ಸೆಂಟ್ಸ್, ಸರ್ವೆ ನಂಬ್ರ 199/2ಎ10 ರಲ್ಲಿ 9 ½ ಸೆಂಟ್ಸ್ ಇರುತ್ತದೆ. ಸದ್ರಿ ಸ್ವತ್ತು ನಾನು ಖರೀದಿ ಮಾಡಿದ ಸ್ವತ್ತಾಗಿರುತ್ತದೆ. ಸರ್ವೆ ನಂಬ್ರ 199/2ಎ ರಲ್ಲಿ 10 ಸೆಂಟ್ಸ್ ನ್ನು ಭೂ ಪರಿವರ್ತನೆ ಮಾಡಲಾಗಿರುತ್ತದೆ. ಭೂ ಪರಿವರ್ತನೆ ಮಾಡಿದ ಸ್ಥಳದಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತೇನೆ. 5 ಸೆಂಟ್ಸ್ ನಲ್ಲಿ ಕೈಗಾರಿಕೆ ಮಾಡಿಕೊಂಡಿರುತ್ತೇನೆ. ನಮ್ಮ ಜೀವನ ನಿರ್ವಹಣೆಗೆ ಆಧಾರ ಕೈಗಾರಿಕೆ ಆಗಿರುತ್ತದೆ. ಪರಿವರ್ತನೆ ಮಾಡಲಾದ ಜಾಗದ ಸರ್ವೆ ನಂಬ್ರ 199/2ಎ2 ಆಗಿರುತ್ತದೆ. ಸ್ಥಳದ ಸುತ್ತ ದಕ್ಷಿಣದಲ್ಲಿ ಪಾಗಾರ ಹಾಕಿಕೊಂಡು ಉಳಿದ 3 ಕಡೆ ಬೇಲಿ ಹಾಕಿರುತ್ತೇವೆ. ಬೀಜಾಡಿಯ ಪಂಚಾಯಿತಿಯಿಂದ ಪರವಾನಿಗೆ ಪಡೆದಿರುತ್ತೇನೆ.

ಪಶ್ಚಿಮದ ಕಡೆಯ 3 ಅಡಿ ಜಾಗವನ್ನು ಬೇಲಿಯ ರಿಪೇರಿಗಾಗಿ ನಾನು ಹೋಗಿ ಬರಲು ಬಿಟ್ಟು ಕೊಟ್ಟಿರುತ್ತೇನೆ. ಬೇಲಿಯನ್ನು ಪ್ರತಿ ವರ್ಷ ರಿಪೇರಿ ಮಾಡಿಸಿಕೊಡುತ್ತೇವೆ. ಪಶ್ಚಿಮದ ಕಡೆ ಬೇಲಿಯ ಹೊರಗಡೆ ಇಟ್ಟುಕೊಂಡ 3 ಅಡಿ ಜಾಗ ನನಗೆ ಸೇರಿರುತ್ತದೆ. ನನ್ನ

ಜಾಗದಲ್ಲಿ ದನಗಳು ಬರದಂತೆ ತಡೆಯಲು ಮತ್ತು ಬೇರೆಯವರು ಅಕ್ರಮ ಪ್ರವೇಶ ಮಾಡಬಾರದೆಂದು ಬೇಲಿಯನ್ನು ಹಾಕಿರುತ್ತೇನೆ. ಆರೋಪಿಗಳ ಎಲ್ಲಾ ಮನೆಗಳಿಗೂ ರಸ್ತೆ ಇದೆ. ನಮ್ಮ ಸ್ವತ್ತಿನ ಮುಖಾಂತರ ಅವರ ಮನೆಗೆ ಹೋಗುವ ಅಗತ್ಯತೆ ಇರುವುದಿಲ್ಲ. ನಾನು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂಬ್ರ 200/2015 ರಂತೆ ದಾವೆಯನ್ನು ಸಲ್ಲಿಸಿದ್ದು, ಅದರಲ್ಲಿ ನನ್ನ ಪರವಾಗಿ ನ್ಯಾಯಾಲಯದಿಂದ ತಡೆಯಾಜ್ಞೆ ಆದೇಶ ಮಾಡಿದ್ದು, ಅದು ಊರ್ಜಿತವಾಗಿರುತ್ತದೆ. ಸದ್ರಿ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ 10-03-2016 ರಲ್ಲಿ 10-25 ಸಮಯಕ್ಕೆ 13 ಜನ ಆರೋಪಿತರು ತಮ್ಮ ಕೈಯಲ್ಲಿ ಕತ್ತಿ, ಹಾರೆ, ಪಿಕಾಶಿಯನ್ನು ಹಿಡಿದುಕೊಂಡು ಬಂದು ಪಶ್ಚಿಮದ ಬೇಲಿಯಲ್ಲಿ ಅಕ್ರಮ ಪ್ರವೇಶ ಮಾಡಿ ಬೇಲಿಯನ್ನು ತೆಗೆದು, ಮರಗಳನ್ನು ಕಡಿದು, ಶಿಲೆ ಕಂಬವನ್ನು ಹಾಗೆ ಬಿಟ್ಟಿರುತ್ತಾರೆ. ಕಡಿದ ಗೆಲ್ಲುಗಳನ್ನು ದೂರ ತೆಗೆದುಕೊಂಡು ಹೋಗಿರುತ್ತಾರೆ. ನಾನು ತಡೆಯಲು ಪ್ರಯತ್ನಿಸಿದಾಗ ಆರೋಪಿತರು ತಾವು ಕೈಯಲ್ಲಿ ಹಿಡಿದುಕೊಂಡು ಬಂದಿದ್ದ ಕತ್ತಿ, ಹಾರೆ, ಪಿಕಾಶಿಯಿಂದ ನನ್ನನ್ನು ಮತ್ತು ನನ್ನ ಪತ್ನಿಗೆ ಹೆದರಿಸಿರುತ್ತಾರೆ. ಸ್ವಲ್ಪ ಹೊತ್ತಿನಲ್ಲಿ ಒಂದು ಲಾರಿಯಲ್ಲಿ ಮಣ್ಣು ತಂದು ಸಮತಟ್ಟು ಮಾಡಿ ರಸ್ತೆ ಮಾಡಿರುತ್ತಾರೆ. ನನಗೆ ಬೋಳಿಮಗನೇ ದೂರು ಕೊಟ್ಟರೆ ನಿನ್ನನ್ನು ಕಡಿದು ಹಾಕುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ. ನಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ದಾರಿ ಮಾಡಿಕೊಂಡಿರುತ್ತಾರೆ. ಆಗ ನಾನು ಮತ್ತು ನನ್ನ ಹೆಂಡತಿ ಮನೆಯ ಒಳಗೆ ಬಾಗಿಲು ಹಾಕಿ ಅಸಹಾಯಕರಾಗಿ ಕಿಟಕಿ ಮೂಲಕ ನೋಡುತ್ತಿದ್ದೇವು.

ನಾನು ನೋಡುತ್ತಿದ್ದಾಗ 2, 3, 7 ಮತ್ತು 9ನೇ ಆರೋಪಿಯಾದ ಶಂಕರನಾರಾಯಣ, ವಾದಿರಾಜ, ಸದಾನಂದ, ಆನಂದ ಕಿಟಕಿ ಬಳಿ ಬಂದು ದೊಣ್ಣೆಯಿಂದ ನನ್ನ ಭುಜಕ್ಕೆ ಹೊಡೆದಿದ್ದು ಮತ್ತು ಕಲ್ಲನ್ನು ಎಸೆದಿದ್ದು, ನಾನು ಚಿಕಿತ್ಸೆ ಪಡೆದಿರುತ್ತೇನೆ. ದಕ್ಷಿಣ ದಿಕ್ಕಿನಲ್ಲಿ ಹಾಕಿದ ಪಾಗಾರವನ್ನು ಹಾರೆ, ಪಿಕಾಶಿಯಿಂದ ಹೊಡೆದು ನಾಶ ಮಾಡಿರುತ್ತಾರೆ. ನಮಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ. ಬೇಲಿಯನ್ನು ಹಾಳು ಮಾಡಿದ್ದರಿಂದ ಸುಮಾರು 20 ಸಾವಿರ ರೂಪಾಯಿ ನಷ್ಟವಾಗಿರುತ್ತದೆ. ದಕ್ಷಿಣದ ಗೋಡೆಗೆ ಸುಮಾರು 5 ಸಾವಿರ ರೂಪಾಯಿ ನಷ್ಟವಾಗಿರುತ್ತದೆ. ನಂತರ ಕುಂದಾಪುರ ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತೇನೆ. ಅವರು ತನಿಖೆ ಮಾಡವುದಾಗಿ ಹೇಳಿ ನನಗೆ ಒಂದು ಹಿಂಬರಹವನ್ನು ಕೊಟ್ಟಿರುತ್ತಾರೆ. ಆರೋಪಿಗಳು ಏನೂ ಮಾಡಿಲ್ಲ ಪಂಚಾಯಿತಿ ಅನುಧಾನದ ಮೂಲಕ ಮಾಡಿದ್ದಾರೆ ಎಂದು ಹಿಂಬರಹ ಕೊಟ್ಟಿರುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲಿಸಿರುವುದಿಲ್ಲ ಮತ್ತು ಸರಿಯಾಗಿ ತನಿಖೆ ಮಾಡಿರುವುದಿಲ್ಲ.

ಆರೋಪಿಗಳಿಗೆ ಸಹಕರಿಸುವ ಉದ್ದೇಶದಿಂದ ನನಗೆ ಹಿಂಬರಹವನ್ನು ನೀಡಿರುತ್ತಾರೆ. ದಿಃ 14-05-2016 ರಂದು 1, 3, 5, 8 ಮತ್ತು 10 ನೇ ಆರೋಪಿತರಾದ ಯಶೋಧ ಮಯ್ಯ, ಸರೋಜ, ಶಾಂಭವಿ, ಗುಲಾಬಿಮ್ಮ, ಶಾರದಾ ಗಾಣಿಗರವರು ಬಂದು ನಮ್ಮ ಆರ್ಯುವೇದಿಕ್ ಗಿಡಗಳನ್ನು ನಾಶ ಮಾಡಿರುತ್ತಾರೆ. ಆರೋಪಿಗಳು ನಮ್ಮದೇ ಜಾಗ ಇದರಲ್ಲಿ ಓಡಾಡಲು ದಾರಿ ಬೇಕು ಎಂದು ನಾಶ ಮಾಡಿರುತ್ತಾರೆ. ನನ್ನ ಜಾಗದ ಪಶ್ಚಿಮದಲ್ಲಿ ಸುನೀಲ್ ಕಾರ್ವಿರವರ ಗದ್ದೆ ಇದ್ದು, ಅದರ ಪಶ್ಚಿಮದಲ್ಲಿ ರಸ್ತೆ ಇರುತ್ತದೆ. ನನ್ನ ಜಾಗದಲ್ಲಿ ರಸ್ತೆ ಇರುವುದಿಲ್ಲ. ಆರೋಪಿಗಳು ರೌಡಿಗಳಂತೆ ವರ್ತಿಸಿ ನಮಗೆ ಬೆದರಿಕೆ ಹಾಕಿರುತ್ತಾರೆ. ನ್ಯಾಯಾಲಯದಿಂದ ತನಿಖೆಗಾಗಿ ಕಳುಹಿಸಲಾಗಿದ್ದು, ಪೊಲೀಸರು ಸರಿಯಾಗಿ ತನಿಖೆ ಮಾಡದೆ ನನ್ನಿಂದ ಒಂದು ಸಹಿಯನ್ನು ಪಡೆದಿರುತ್ತಾರೆ. ಆದ್ದರಿಂದ ನನಗೆ ನ್ಯಾಯ ಕೊಡಿಸಿ ರಕ್ಷಣೆ ಕೊಟ್ಟು ಆರೋಪಿತರಿಗೆ ಶಿಕ್ಷೆ ವಿಧಿಸಬೇಕು ಎಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಸಾಕ್ಷಿಯು ಹಾಜರುಪಡಿಸಿರುವ ಖಾಸಗಿ ಪಿರ್ಯಾದನ್ನು ನಿ.ಸಿ-1 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಸಿ.1 ಎ ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಯನ್ನು ವಕೀಲರವರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ